725

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 5ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ಮುದ್ದಗಿರಿ ತಾಲ್ಲೂಕಿನಲ್ಲಿ 1896—97ನೇ ಸಾಲಿಗೆ ಕುರಂಗದ ಕಲ್ಲನ್ನು ಜಮಾಯಿಸತಕ್ಕ ಹಕ್ಕನ್ನು ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆಂದು 1896ನೇ ಇಸವಿ ಡಿಸೆಂಬರ್ 3ನೇ ಮುಕ್ತುಮಿನ ಮೈಸೂರ ಗೆಜೆಟ್ಟಿನ ಎರಡನೇ ಭಾಗದ 791ನೇ ನಂಬರ್ ಪುಟದಲ್ಲಿ ಕನ್ನಡದಲ್ಲಿ ಛಾಯಿಷ್ ಮಾಡಲ್ಪಟ್ಟಿರುವ ಇಸ್ತಿಹಾರನ್ನು ರದ್ದುಮಾಡಿ ಇರುತ್ತೆ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ರೊಟೆಕ್ಟೇಡ್‌ಗಳು ಪಿಕಾರಿ ಮತ್ತು ಇತರ ಬ್ಯಾಟೆಗೆಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ರೊಟೆಕ್ಟೇಡ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾವ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ರೊಟೆಕ್ಟೇಡ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ರೊಟೆಕ್ಟೇಡ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆರಿ ಪ್ರೊಡಕ್ಟಿವ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮೂರೇಗುಡಿ ಡಿಟೋ
	ಕಾಕನಕೋಟೆ ಪ್ರೊಟೆಕ್ಟೇಡ್
	ಮಾಸ್ತಿಗುಡಿ ಡಿಟೋ
	ಮಂಚಗವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ರೊಟೆಕ್ಟೇಡ್
	ಹೊಂಗಹಳ್ಳಿ ಸಂದಲ್ ಪ್ರೊಟೆಕ್ಟೇಡ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ತಾರೀಖು 30—11—96.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುರೇಂಜ್ ಸ್ಟೇಟ್ ಫಾರೆಸ್ಟ್ಸುಗಳಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು 1,000 ಗಾಡಿ ಬೋಜಾದನುವಿನ ಗೊಬ್ಬರವನ್ನ ಈ ಕೆಳಗೆ ನಮೂದಿಸುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜು ಮೂಲಕ ವಿಕ್ರಯಿಸುತ್ತಾರೆ.